1518 (1366) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ತಾಲ್ಲೂಕಿನಲ್ಲಿ 33 ಕೆ ವಿ ಮತ್ತು 110 ಕೆ ವಿ ಉಪಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಬಂದಿರುವ ಹೊಸ ಪ್ರಸ್ತಾವನೆಗಳು ಯಾವುವು, (ವಿವರಗಳನ್ನು ಒದಗಿಸುವುದು),

ಆ) ಸರ್ಕಾರವು ಈ ಪ್ರಸ್ತಾವನೆಗಳಿಗೆ ಮಂಜೂರಾತಿಯನ್ನು ಯಾವಾಗ ನೀಡುವುದು,

ಇ) ಸೇಡಂ ತಾಲ್ಲೂಕಿನಲ್ಲಿ ಆರ್ ಎಲ್ ಎಂ ಎಸ್ (ರೂರಲ್ ಲೋಡ್ ಮ್ಯಾನೇಜ್‌ಮೆಂಟ್ ಸ್ಕೀಂ) ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದೆ,

ಈ) ಸೇಡಂ ತಾಲ್ಲೂಕಿನಲ್ಲಿನ ಆರ್ ಎಲ್ ಎಂ ಎಸ್ ಯೋಜನೆಯ ಅಂದಾಜು ವೆಚ್ಚ,

ಉ) ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯು ಇದನ್ನು ಯಾವಾಗ ಕಾರ್ಯಗತಗೊಳಿಸುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಸೇಡಂ ತಾಲ್ಲೂಕಿನ ಮುಧೋಳ್, ಕೊಡ್ಲ, ಮಾಲ್ಕಡ್, ಹಂದರ್ಕಿ ಮತ್ತು ಮೊಟಕಪಳ್ಳಿಯಲ್ಲಿ 33 ಕೆ ವಿ ಹೊಸ ಉಪ ಕೇಂದ್ರಗಳ ಸ್ಥಾಪನೆಯ ಪ್ರಸ್ತಾವನೆಯಿದೆ

ಸೇಡಂ ತಾಲ್ಲೂಕಿನಲ್ಲಿ 110 ಕೆ ವಿ ಉಪಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಸದ್ಯದಲ್ಲಿ ಇರುವುದಿಲ್ಲ

ಆ) ಮುಧೋಳ್, ಕೊಡ್ಲ ಮತ್ತು ಮಾಲ್ಕಡ್‌ನಲ್ಲಿ 33 ಕೆ ವಿ ಹೊಸ ಉಪ ಕೇಂದ್ರ ಸ್ಥಾಪನೆಗೆ ಮಂಜೂರಾತಿ ನೀಡಿದ್ದು, ಕೆಲಸವು ಪ್ರಗತಿಯಲ್ಲಿದೆ ಹಂದರ್ಕಿ ಮತ್ತು ಮೊಟಕಪಳ್ಳಿಯಲ್ಲಿ 33 ಕೆ ವಿ ಉಪ ಕೇಂದ್ರ ಸ್ಥಾಪನೆಯ ಪ್ರಸ್ತಾವನೆಯಿದ್ದು ಇದನ್ನು ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗುವುದು

ಇ) ಹೌದು

ಈ) ಸೇಡಂ ತಾಲ್ಲೂಕಿನಲ್ಲಿ ಆರ್ ಎಲ್ ಎಂ ಎಸ್ ಯೋಜನೆಯ ಅಂದಾಜು ವೆಚ್ಚ ರೂ 550 ಲಕ್ಷಗಳು

ಉ) ಸೇಡಂ ತಾಲ್ಲೂಕಿನಲ್ಲಿನ ಆರ್ ಎಲ್ ಎಂ ಎಸ್ ಯೋಜನೆಯು ಪ್ರಗತಿಯಲ್ಲಿದೆ ಹಾಗೂ ಜೂನ್ 2007ರಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಿ ಕಾರ್ಯಗತಗೊಳಿಸುವ ಗುರಿಯನ್ನು ಹೊಂದಲಾಗಿದೆ

1519 (1367) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ಎಸ್ ಎಫ್ ಸಿ ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗದಿಪಡಿಸಲಾದ ಅನುದಾನ,

ಆ) ಎಸ್ ಎಫ್ ಸಿ ಅಡಿಯಲ್ಲಿ (ವಿವೇಚನಾ ನಿಧಿ) ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾದ ಅನುದಾನ ನಗರ ಸ್ಥಳೀಯ ಸಂಸ್ಥೆವಾರು ವಿವರ ನೀಡುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) 1530 29 ಕೋಟಿ ರೂ ಗಳು

ಆ) 2006–07ನೇ ಸಾಲಿನಲ್ಲಿ ರೂ 63 25 ಕೋಟಿ ಅನುದಾನ ಬಿಡುಗಡೆ ಮಾಡಿದೆ ವಿವರಗಳನ್ನು ಅನುಬಂಧದಲ್ಲಿ ನೀಡಿದೆ